**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3520/2021**

| | | | |
|---|---|---|---|
| **ಹೆಸರು** | **:** | **ಮಂಜಲೇಸಾಬ** | **ಚಾ.ಸಾ. 7** |
| **ತಂದೆಯ ಹೆಸರು** | **:** | **ಇಸ್ಮಾಯಿಲಸಾಬ** | **ಪ್ರಾ.ಸಾ. 5** |
| **ವಯಸ್ಸು** | **:** | **45 ವರ್ಷ** | **ದಿನಾಂಕಃ 12-02-2025** |
| **ಉದ್ಯೋಗ** | **:** | **ವ್ಯಾಪಾರ** | |
| **ವಾಸಸ್ಥಳ** | **:** | **ಚಂದಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ 1, 4 ರಿಂದ 6 ಮತ್ತು 8 ರವರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಮತ್ತು ಅವರು ನನಗೆ ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 11-05-2021 ರಂದು ಬೆಳಿಗ್ಗೆ 10-15 ಗಂಟೆಗೆ ನಾನು ಮರಳಿ ಮನೆಗೆ ಹೋಗುತ್ತಿರುವಾಗ ಚಂದಾಪುರ ಗಾಂದಿ ಚೌಕ ಹತ್ತಿರ ಮುನ್ನಾ ಹೋಟೆಲ ಹತ್ತಿರ ಬಹಳಷ್ಟು ಜನ ಸಾಮಾಜೀಕ ಅಂತರವನು ಕಾಯ್ದುಕೊಳ್ಳದೇ ಮಾಸ್ಕಗಳನ್ನು ಧರಿಸದೇ ನಿಂತಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ 1 ಮತ್ತು 4 ರವರು ಅಂಗಡಿಯ ಮಾಲೀಕನನ್ನು ವಿಚಾರಿಸಿದಾಗ ತನ್ನ ಹೆಸರು ಸೈಯ್ಯದ ಖಾಜಾ ತಂದೆ ಸೈಯ್ಯದ ಅಮೀರ ಎಂದು ತಿಳಿಸಿರುತ್ತಾನೇ ಎಂದರೆ ಸರಿಯಲ್ಲ. ಹೋಟೆಲ ಮಾಲೀಕನು ಕೋವಿಡ 19 ಸಂಬಂಧ ಸರಕಾರ ಹೊರಡಿಸಿದ ಆದೇಶಗಳನ್ನು ಮತ್ತು ನಿಯಮಗಳನ್ನು ಪಾಲಿಸದೇ ತನ್ನ ಅಂಗಡಿಯನ್ನು ತೆರೆದಿದ್ದ ಎಂದರೆ ಸರಿಯಲ್ಲ. ಈ ರೀತಿ ನಾನು ದಿನಾಂಕೇ 14-05-2021 ರಂದು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-30 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ MSS ವಕೀಲರಿಂದಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**